# ಕುವೆಂಪು ವಿಶ್ವವಿದ್ಯಾಲಯ

**ನಿರ್ದೇಶಕರ ಕಾರ್ಯಾಲಯ**

**ದೂರಶಿಕ್ಷಣ ನಿರ್ದೇಶನಾಲಯ**

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451 ಶಿವಮೊಗ್ಗ ಜಿಲ್ಲೆ, ಕರ್ನಾಟಕ

ದೂರವಾಣಿ: 08282 - 256450, 256426, 256246

Fax: 08282-256370; website:www. kuvempuuniversitydde.org

E-mail: info@kuvempuuniversitydde.org; ssgc@ kuvempuuniversitydde.org

## ಆಂತರಿಕ ಮೌಲ್ಯಮಾಪನದ ಸಂಕ್ಷಿಪ್ತ ಸಾರಲೇಖಗಳಿಗೆ ವಿಷಯಗಳು (2019–20)

## ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್

**ಸೂಚನೆಗಳು:** 1. ಪ್ರತೀ ಪತ್ರಿಕೆಗೆ ಒಟ್ಟು 20 ಅಂಕಗಳು. ಅವುಗಳಲ್ಲಿ ಮೊದಲ ಅಸೈನ್‌ಮೆಂಟ್‌ಗೆ 10 ಅಂಕಗಳು ಮತ್ತು ಎರಡನೇ ಅಸೈನ್‌ಮೆಂಟ್‌ಗೆ 05 ಅಂಕಗಳು. ಉಳಿದ ಐದು ಸಂಪರ್ಕ ತರಗತಿಯ ಹಾಜರಿಗೆ.

2. ಪ್ರತೀ ಪತ್ರಿಕೆಯ ಮೊದಲ ಅಸೈನ್‌ಮೆಂಟ್ ಕನಿಷ್ಠ 10 ಪುಟಗಳನ್ನಾದರೂ ಹೊಂದಿರಬೇಕು ಮತ್ತು ಎರಡನೇ ಅಸೈನ್‌ಮೆಂಟ್ ಕನಿಷ್ಠ 05 ಪುಟಗಳನ್ನಾದರೂ ಹೊಂದಿರಬೇಕು.
3. ಸಾರಲೇಖಗಳನ್ನು ಬರೆಯಲು ಪ್ರಾರಂಭಿಸುವ ಮೊದಲು ವಿದ್ಯಾರ್ಥಿಗಳು ಇದರೊಂದಿಗೆ ಪ್ರತ್ಯೇಕವಾಗಿ ಕಳುಹಿಸಲಾಗಿರುವ ಸೂಚನೆಗಳನ್ನು ಓದಲು ಸೂಚಿಸಿದೆ.
4. ಹೆಚ್ಚಿನ ಮಾಹಿತಿಗಾಗಿ ಕೋರ್ಸ್ ಸಂಯೋಜಕರನ್ನು ಸಂಪರ್ಕಿಸಬಹುದು. (ಡಾ.ಸತೀಶ್ ಕುಮಾರ್ ಮೊಬೈಲ್ ಸಂಖ್ಯೆ: 9448870461)

---

**ಪತ್ರಿಕೆ–1: ಪತ್ರಿಕೋದ್ಯಮದ ಸ್ವರೂಪ, ಗುಣಲಕ್ಷಣಗಳು ಮತ್ತು ಮಹತ್ವ**

1. ಪೌರತ್ವ ತಿದ್ದುಪಡಿ ಕಾಯಿದೆ ಕುರಿತು ಒಂದು ವಿಮರ್ಶಾತ್ಮಕ ಲೇಖನ್ರ ಬರೆಯಿರಿ. (10 ಅಂಕಗಳು)
2. ಯಾವುದಾದರೂ ಹೂವು, ಹಣ್ಣು ಅಥವಾ ಗಿಡದ ಕುರಿತು ಒಂದು ನುಡಿಚಿತ್ರ ಬರೆಯಿರಿ. (05 ಅಂಕಗಳು)

**ಪತ್ರಿಕೆ–2: ಕನ್ನಡ ಪತ್ರಿಕೋದ್ಯಮದ ಐತಿಹಾಸಿಕ ಬೆಳವಣಿಗೆ– ವಿವಿಧ ಮಾದರಿಗಳು–ಸಾಹಿತ್ಯಕ ಮತ್ತು ಸಾಂಸ್ಕೃತಿಕ ಆಯಾಮಗಳು–ವಿವಿಧ ವೈಚಾರಿಕ ನೆಲೆಗಳು**

1. ಕನ್ನಡ ದಿನಪತ್ರಿಕೆಗಳ ಪುರವಣಿಗಳನ್ನು ಹೋಲಿಕೆ ಮಾಡಿ ಒಂದು ವಿಶ್ಲೇಷಣಾತ್ಮಕ ಲೇಖನ ಬರೆಯಿರಿ. (10 ಅಂಕಗಳು)
2. ನಿಮ್ಮ ಇಷ್ಟದ ನಿಯತಕಾಲಿಕ ಕುರಿತು ಒಂದು ಲೇಖನ ಬರೆಯಿರಿ. (05 ಅಂಕಗಳು)

**ಪತ್ರಿಕೆ–3: ಕನ್ನಡ ಪತ್ರಿಕೋದ್ಯಮ ಮತ್ತು ಇತರ ಸಮೂಹ ಮಾಧ್ಯಮಗಳು**

1. ಭಾರತದಲ್ಲಿ ಬಾನುಲಿಯ ಪ್ರಸ್ತುತ ಸ್ಥಾನಮಾನ ಕುರಿತು ಒಂದು ವಿಶ್ಲೇಷಣಾತ್ಮಕ ಪ್ರಬಂಧ ಬರೆಯಿರಿ. (10 ಅಂಕಗಳು)
2. 'ಚುನಾವಣೆಗಳಲ್ಲಿ ಸಾಮಾಜಿಕ ಜಾಲತಾಣಗಳ ಪಾತ್ರ' ಕುರಿತು ಒಂದು ಬಾನುಲಿ ಭಾಷಣ ಬರೆಯಿರಿ. (05 ಅಂಕಗಳು)

**ಪತ್ರಿಕೆ–4: ಸಂಪ್ರಬಂಧ:** ವಿದ್ಯಾರ್ಥಿಗಳು ಕನ್ನಡದಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಕ್ಷೇತ್ರಕ್ಕೆ ಸಂಬಂಧಿಸಿದ ಯಾವುದಾದರೂ ವಿಷಯವನ್ನು ಆಯ್ಕೆಮಾಡಿಕೊಂಡು ಕೋರ್ಸ್ ಸಂಯೋಜಕರು ಸೂಚಿಸಿದ ಮಾರ್ಗದರ್ಶಕರ ಮಾರ್ಗದರ್ಶನದಂತೆ ಅಧ್ಯಯನ ಮಾಡಿ ಸಂಪ್ರಬಂಧ ರಚಿಸಿ, ಅದರ ಮೂರು ಮುದ್ರಿತ ಪ್ರತಿಗಳಲ್ಲಿ ಎರಡು ಪ್ರತಿಗಳನ್ನು ಸಿಡಿಯೊಂದಿಗೆ ನಿಗದಿತ ದಿನಾಂಕದೊಳಗೆ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ಉಳಿದ ಒಂದು ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಂಡು ಮೌಖಿಕ ಪರೀಕ್ಷೆ ಸಂದರ್ಭದಲ್ಲಿ ತರಬೇಕು. ಸಂಪ್ರಬಂಧ ರಚನೆಗೆ 80 ಅಂಕಗಳು ಮತ್ತು ಸಂಪ್ರಬಂಧದ ಆಂತರಿಕ ಮೌಲ್ಯಮಾಪನದ 20 ಅಂಕಗಳನ್ನು ಮೌಖಿಕ ಪರೀಕ್ಷೆ ಮೂಲಕ ನೀಡಲಾಗುವುದು. **ಸಂಪ್ರಬಂಧ ರಚನೆ ಕುರಿತು ಮಾರ್ಗದರ್ಶನ ಸೂತ್ರಗಳನ್ನು ನೀಡಲಾಗಿದ್ದು, ಅವುಗಳಿಗೆ ಅನುಗುಣವಾಗಿರುವ ಸಂಪ್ರಬಂಧಗಳನ್ನು ಮಾತ್ರ ಸ್ವೀಕರಿಸಲಾಗುವುದು.**

---

**ವಿ.ಸೂ. ಪ್ರತೀ ಪತ್ರಿಕೆಯ ಆಂತರಿಕ ಮೌಲ್ಯಮಾಪನದ 05 ಅಂಕಗಳು ಸಂಪರ್ಕ ತರಗತಿಯ ಹಾಜರಿಗೆ ಸೀಮಿತವಾಗಿರುವುದರಿಂದ ಮತ್ತು ಸಂಪ್ರಬಂಧ ರಚನೆ ಕುರಿತ ಮಾಹಿತಿಯನ್ನು ಸಂಪರ್ಕ ತರಗತಿಯಲ್ಲೇ ನೀಡುವುದರಿಂದ ಈ ಕೋರ್ಸ್ ಆಯ್ಕೆಮಾಡಿಕೊಂಡ ಎಲ್ಲಾ ಅಧ್ಯಯನ ಕೇಂದ್ರಗಳ ವಿದ್ಯಾರ್ಥಿಗಳು ಕಡ್ಡಾಯವಾಗಿ ಸಂಪರ್ಕ ತರಗತಿಗೆ ಹಾಜರಾಗಬೇಕು.**

# ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್
## ಸಂಪ್ರಬಂಧ ರಚನೆಗೆ ಮಾರ್ಗದರ್ಶನ ಸೂತ್ರಗಳು

ಈ ಕೋರ್ಸಿನಲ್ಲಿ ಸಂಪ್ರಬಂಧ ಕೂಡಾ ಒಂದು ಪತ್ರಿಕೆಯಾಗಿದ್ದು, ಅದು 100 ಅಂಕಗಳನ್ನು ಹೊಂದಿರುತ್ತದೆ. ಅದರಲ್ಲಿ 80 ಅಂಕಗಳು ಸಂಪ್ರಬಂಧದ ಮೌಲ್ಯಮಾಪನಕ್ಕೆ ಮತ್ತು 20 ಅಂಕಗಳನ್ನು ಮೌಖಿಕ ಪರೀಕ್ಷೆಗೆ ನೀಡಲಾಗುವುದು. ಮೌಲ್ಯಮಾಪನ ಮತ್ತು ಮೌಖಿಕ ಪರೀಕ್ಷೆಯನ್ನು ಆಂತರಿಕ ಮತ್ತು ಬಾಹ್ಯ ಮೌಲ್ಯಮಾಪಕರು ಮಾಡುತ್ತಾರೆ. ಆದ್ದರಿಂದ ಸಂಪ್ರಬಂಧವನ್ನು ವೈಜ್ಞಾನಿಕ ವಿಧಾನದಲ್ಲಿ ರಚಿಸಬೇಕು.

ಸಂಪ್ರಬಂಧವನ್ನು ಮೂರು ಪ್ರತಿಗಳಲ್ಲಿ ಸಿದ್ಧಪಡಿಸಿ, ಎರಡು ಪ್ರತಿಗಳನ್ನು ಅಸೈನ್‌ಮೆಂಟ್‌ಗಳ ಜೊತೆ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ಅದರ ಜೊತೆಗೆ ಸಂಪ್ರಬಂಧದ ಸಾಫ್ಟ್ ಕಾಪಿ ಇರುವ ಸಿಡಿಯನ್ನೂ ಸಲ್ಲಿಸಬೇಕು. ಉಳಿದ ಒಂದು ಪ್ರತಿ ಮೌಖಿಕ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿ ಕೈಯಲ್ಲಿರಬೇಕು.

ಸಂಪ್ರಬಂಧ ರಚಿಸುವ ಸಂದರ್ಭದಲ್ಲಿ ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ ಕ್ಷೇತ್ರಕ್ಕೆ ಸಂಬಂಧಪಟ್ಟ ಅಂದರೆ ಪತ್ರಿಕೆ, ನಿಯತಕಾಲಿಕ, ಬಾನುಲಿ, ಟೆಲಿವಿಷನ್, ಸಿನೇಮಾ, ಅಂತರ್ಜಾಲ, ಜಾಹೀರಾತು, ಸಾರ್ವಜನಿಕ ಸಂಪರ್ಕ, ಜನಪದ ಮಾಧ್ಯಮ ಮುಂತಾದ ವಿಷಯಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರಬೇಕು. ಉಳಿದ ವಿಷಯಗಳ ಸಂಪ್ರಬಂಧಗಳನ್ನು ಸ್ವೀಕರಿಸಲಾಗುವುದಿಲ್ಲ. ವಿಷಯದ ಆಯ್ಕೆ ಮಾಡುವಾಗ ಕೋರ್ಸ್ ಸಂಯೋಜಕರ ಅಥವಾ ಸಂಯೋಜಕರು ಸೂಚಿಸಿದ ಮಾರ್ಗದರ್ಶಕರ ಸಲಹೆ ಪಡೆಯುವುದು ಉತ್ತಮ. ಈ ತನಕ ಅಧ್ಯಯನವಾಗದ ವಿಷಯಗಳನ್ನು ಮಾತ್ರ ಆಯ್ಕೆ ಮಾಡಬೇಕು. ಒಂದೇ ವಿಷಯದ ಬಗ್ಗೆ ಇಬ್ಬರು ವಿದ್ಯಾರ್ಥಿಗಳು ಅಧ್ಯಯನ ಮಾಡಬಾರದು.

ಸಂಪ್ರಬಂಧ ಕನಿಷ್ಠ 50 ಪುಟಗಳನ್ನಾದರೂ ಹೊಂದಿರಬೇಕು.

ಸಂಪ್ರಬಂಧವನ್ನು ಎ4 ಗಾತ್ರದ ಕಾಗದದ ಒಂದೇ ಮಗ್ಗುಲಲ್ಲಿ ಟೈಪ್ ಮಾಡಿರಬೇಕು.

ಕೈಬರಹದ ಸಂಪ್ರಬಂಧವನ್ನು ಸ್ವೀಕರಿಸಲಾಗುವುದಿಲ್ಲ.

ತಲೆ ಬರಹದ ಅಕ್ಷರದ ಗಾತ್ರ 16, ಉಪ ಶೀರ್ಷಿಕೆಗಳ ಅಕ್ಷರದ ಗಾತ್ರ 14 ಮತ್ತು ಪಠ್ಯದ ಅಕ್ಷರದ ಗಾತ್ರ 12 ಆಗಿರಬೇಕು.

ಬರಹದ ಸಾಲುಗಳ ಮಧ್ಯೆ 1.5 ಅಂತರವಿರಬೇಕು.

ಬುಕ್‌ಬೈಂಡ್ ಮಾಡಿರಬೇಕು.

ಸಂಪ್ರಬಂಧದ ಕವರ್ ಪುಟ ಮತ್ತು ಮೊದಲ ಪುಟದಲ್ಲಿ ಸಂಪ್ರಬಂಧದ ಶೀರ್ಷಿಕೆ, ವಿದ್ಯಾರ್ಥಿಯ ಹೆಸರು, ಮಾರ್ಗದರ್ಶಕರ ಹೆಸರು ಮತ್ತು ವಿಭಾಗದ ಹೆಸರು ಇರಬೇಕು. (ಮಾದರಿ ನೋಡಿ)

ಎರಡನೇ ಪುಟದಲ್ಲಿ ಪ್ರಮಾಣಪತ್ರವಿರಬೇಕು. ಅದಕ್ಕೆ ವಿದ್ಯಾರ್ಥಿ, ಮಾರ್ಗದರ್ಶಕರು ಮತ್ತು ಕೋರ್ಸ್ ಸಂಯೋಜಕರು ಸಹಿ ಮಾಡಿರಬೇಕು. (ಮಾದರಿ ನೋಡಿ)

ಮೂರನೇ ಪುಟದಲ್ಲಿ ಪರಿವಿಡಿ ಇರಬೇಕು. ಅದರಲ್ಲಿ ಅಧ್ಯಾಯಗಳ ಹೆಸರು ಮತ್ತು ಪುಟ ಸಂಖ್ಯೆ ಇರಬೇಕು. ಪ್ರತಿಯೊಂದು ಅಧ್ಯಾಯವನ್ನು ಹೊಸ ಪುಟದಿಂದ ಆರಂಭಿಸಬೇಕು. (ಮಾದರಿ ನೋಡಿ)

ಮೊದಲ ಅಧ್ಯಾಯದ ಹೆಸರು **ಪೀಠಿಕೆ**. ಇದರಲ್ಲಿ ಸಂಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡ ವಿಷಯದ ಹಿನ್ನೆಲೆ ಮಾಹಿತಿ ಇರಬೇಕು. ಉದಾಹರಣೆಗೆ ಆಯ್ಕೆಮಾಡಿಕೊಂಡ ವಿಷಯ 'ಗ್ರಾಮೀಣಾಭಿವೃದ್ಧಿಯಲ್ಲಿ ಮಾಧ್ಯಮದ ಪಾತ್ರ' ಎಂದಾಗಿದ್ದರೆ ಪೀಠಿಕೆಯಲ್ಲಿ ಸಮೂಹ ಮಾಧ್ಯಮಗಳ ಪರಿಚಯ, ಸಮೂಹ ಮಾಧ್ಯಮಗಳ ಕಾರ್ಯಗಳು, ಗ್ರಾಮೀಣಾಭಿವೃದ್ಧಿಯ ಅರ್ಥ ಮತ್ತು ಮಹತ್ವ, ಗ್ರಾಮೀಣಾಬಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರ, ಅಧ್ಯಯನದ ಮಹತ್ವ ಮುಂತಾದ ವಿಷಯಗಳನ್ನು ಚರ್ಚಿಸಬೇಕು.

ಎರಡನೇ ಅಧ್ಯಾಯದ ಹೆಸರು **ಸಾಹಿತ್ಯ ಸಮೀಕ್ಷೆ**. ಈ ಅಧ್ಯಾಯದಲ್ಲಿ ಸಂಪ್ರಬಂಧದ ವಿಷಯಕ್ಕೆ ಸಂಬಂಧಪಟ್ಟಂತೆ ಮತ್ತು ಅದಕ್ಕೆ ಪೂರಕವಾಗಿ ಈ ತನಕ ನಡೆದಿರುವ ಅಧ್ಯಯನಗಳನ್ನು ವಿಮರ್ಶೆ ಮಾಡಬೇಕು. ಅದಕ್ಕಾಗಿ ಸಂಶೋಧನಾ ಕೃತಿಗಳು, ಮಹಾಪ್ರಬಂಧಗಳು, ಪ್ರೌಢ ಪ್ರಬಂಧಗಳು, ಸಂಶೋಧನಾ ಲೇಖನಗಳನ್ನು ವಿಮರ್ಶೆಗೆ ಒಳಪಡಿಸಬೇಕು. ಕೊನೆಯಲ್ಲಿ ಈ ತನಕ ನಡೆದಿರುವ ಅಧ್ಯಯನಗಳಿಗಿಂತ ಪ್ರಸ್ತುತ ಅಧ್ಯಯನ ಹೇಗೆ ಭಿನ್ನವೆಂದು ವಿವರಿಸಬೇಕು.

ಮೂರನೇ ಅಧ್ಯಾಯದ ಹೆಸರು **ಅಧ್ಯಯನ ವಿಧಾನ**. ಇದರಲ್ಲಿ ಅಧ್ಯಯನ ವಿಧಾನಕ್ಕೆ ಸಂಬಂಧಿಸಿದ ಪೀಠಿಕೆ, ಅಧ್ಯಯನದ ಸಾಮಾನ್ಯ ಉದ್ದೇಶ ಮತ್ತು ನಿರ್ದಿಷ್ಟ ಉದ್ದೇಶಗಳು, ಅಧ್ಯಯನ ಕ್ಷೇತ್ರದ ಪರಿಚಯ, ನಮೂನೆ, ಪ್ರಾಥಮಿಕ ಮತ್ತು ಆನುಷಂಗಿಕ ಮಾಹಿತಿ ಸಂಗ್ರಹಕ್ಕೆ ಅನುಸರಿಸಿದ ವಿಧಾನಗಳು ಮತ್ತು ಅಧ್ಯಯನದ ಇತಿಮಿತಿಗಳಿರಬೇಕು.

ನಾಲ್ಕನೇ ಅಧ್ಯಾಯದ ಹೆಸರು **ದತ್ತಾಂಶ ವಿಶ್ಲೇಷಣೆ**. ಇದು ಸಂಪ್ರಬಂಧದ ಮುಖ್ಯವಾದ ಭಾಗವಾಗಿರುತ್ತದೆ. ಇದರಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳನ್ನು ಗುಣಾತ್ಮಕವಾಗಿ ಅಥವಾ ಪ್ರಮಾಣಾತ್ಮಕವಾಗಿ ವಿಶ್ಲೇಷಣೆಗೆ ಒಳಪಡಿಸಬೇಕು. ಗುಣಾತ್ಮಕವಾಗಿ ವಿಶ್ಲೇಷಣೆ ಮಾಡುವಾಗ ಸೂಕ್ತ ಸಿದ್ಧಾಂತಗಳನ್ನು ಬಳಕೆ ಮಾಡಬಹುದು. ಪ್ರಮಾಣಾತ್ಮಕವಾಗಿ ವಿಶ್ಲೇಷಣೆ ಮಾಡುವಾಗ ಸೂಕ್ತ ಸಂಖ್ಯಾಶಾಸ್ತ್ರ ವಿಧಾನಗಳನ್ನು ಬಳಸಿ, ಅಂಕಿಅಂಶಗಳನ್ನು ಕೋಷ್ಠಕಗಳಲ್ಲಿ ನೀಡಬೇಕು. ಆ ಅಂಕಿಅಂಶಗಳಿಗೆ ಪ್ರತೀ ಕೋಷ್ಠಕದ ಕೆಳಗೆ ವಿವರ ಮತ್ತು ಅದು ಕೊಡುವ ಅರ್ಥವನ್ನು ವಿವರಿಸಬೇಕು. ಈ ಅಧ್ಯಾಯ ಕನಿಷ್ಟ 20 ಪುಟಗಳನ್ನಾದರೂ ಹೊಂದಿರಬೇಕು.

ಕೊನೆಯ ಅಧ್ಯಾಯದ ಹೆಸರು **ಸಾರಾಂಶ ಮತ್ತು ಉಪಸಂಹಾರ**. ಇದರಲ್ಲಿ ಇಡೀ ಅಧ್ಯಯನದ ಸಾರಾಂಶ ತಿಳಿಸಿ, ಪ್ರಮುಖ ಫಲಿತಾಂಶಗಳನ್ನು ನೀಡಬೇಕು. ಕೆಲವೊಮ್ಮೆ ಅಧ್ಯಯನದ ಆಧಾರದಲ್ಲಿ ಸಲಹೆ ಅಥವಾ ಶಿಫಾರಸ್ಸುಗಳನ್ನು ನೀಡಬಹುದು. ಕೊನೆಗೊಂದು ಉಪಸಂಹಾರವಿರಬೇಕು.

ಈ ಅಧ್ಯಾಯಗಳ ಜೊತೆಗೆ ಕೊನೆಯಲ್ಲಿ ಅಧ್ಯಯನಕ್ಕೆ ಬಳಸಿಕೊಂಡ ಕೃತಿಗಳ ಆಕರ ಮೂಲಗಳಿರಬೇಕು. ಅವುಗಳನ್ನು ನೀಡುವಾಗ ಮೊದಲು ಲೇಖಕರ ಹೆಸರು, ನಂತರ ಆವರಣದಲ್ಲಿ ಕೃತಿ ಪ್ರಕಟವಾದ ವರ್ಷ, ಕೃತಿಯ ಹೆಸರು, ಪ್ರಕಟಣಾ ಸ್ಥಳ ಮತ್ತು ಪ್ರಕಾಶಕರ ಹೆಸರು ಈ ರೂಪದಲ್ಲಿ ನೀಡಬೇಕು. ಉದಾಹರಣೆಗೆ: ಚಂದ್ರಶೇಖರ. ಬಿ.ಎಸ್ (2003). ಸಂವಹನ ಮಾಧ್ಯಮಗಳು, ಹಂಪಿ: ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ.

ಇದಲ್ಲದೆ ಸಂಪ್ರಬಂಧದ ಕೊನೆಯಲ್ಲಿ ಅನುಬಂಧಗಳನ್ನು ಕೂಡಾ ನೀಡಲಾಗುತ್ತದೆ. ಅವುಗಳಲ್ಲಿ ಅಧ್ಯಯನ ಕ್ಷೇತ್ರದ ನಕ್ಷೆ, ಪ್ರಶ್ನಾವಳಿ, ಛಾಯಾಚಿತ್ರಗಳಿರುತ್ತವೆ.

ಹೆಚ್ಚಿನ ಮಾಹಿತಿಗಾಗಿ ಕೋರ್ಸ್ ಸಂಯೋಜಕರನ್ನು ಸಂಪರ್ಕಿಸಬಹುದು. (ಡಾ.ಸತೀಶ್ ಕುಮಾರ್ ಮೊಬೈಲ್ ಸಂಖ್ಯೆ: 9448870461)

**ಕವರ್ ಪುಟದ ಮಾದರಿ**

# ಕನ್ನಡ ದಿನಪತ್ರಿಕೆಗಳಲ್ಲಿ ಪುರವಣಿಗಳು: ಆಯ್ದ ದಿನಪತ್ರಿಕೆಗಳ ಒಂದು ಅಧ್ಯಯನ

**ದೂರ ಶಿಕ್ಷಣ ನಿರ್ದೇಶನಾಲಯದ ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪದವಿಯ ಆಂಶಿಕ ಅವಶ್ಯಕತೆಗಾಗಿ ರಚಿಸಲಾದ ಸಂಶೋಧನಾತ್ಮಕ ಪ್ರೌಢ ಪ್ರಬಂಧ**

ಸಂಶೋಧನಾ ವಿದ್ಯಾರ್ಥಿ
**ಸುರೇಶ್**
**ನೋಂದಣಿ ಸಂಖ್ಯೆ: ಡಿಜೆ101001**
ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್
ದೂರಶಿಕ್ಷಣ ನಿರ್ದೇಶನಾಲಯ

ದೂರಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

**2019-20**

**ಪ್ರಮಾಣಪತ್ರದ ಮಾದರಿ**

# ಪ್ರಮಾಣ ಪತ್ರ

**"ಕನ್ನಡ ದಿನಪತ್ರಿಕಗಳಲ್ಲಿ ಪುರವಣಿಗಳು: ಆಯ್ದ ದಿನಪತ್ರಿಕೆಗಳ ಒಂದು ಅಧ್ಯಯನ"** ಎಂಬ ಸಂಶೋಧನಾತ್ಮಕ ಪ್ರೌಢ ಪ್ರಬಂಧವನ್ನು ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪದವಿಯ ಆಂಶಿಕ ಅವಶ್ಯಕತೆಗಾಗಿ ರಚಿಸಲಾಗಿದೆ. ಈ ಪ್ರೌಢ ಪ್ರಬಂಧವನ್ನು ಈ ಮೊದಲು ಬೇರೆಲ್ಲಿಯೂ ಬೇರಾವ ರೂಪದಲ್ಲಿಯೂ ಸಲ್ಲಿಸಲಾಗಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ದಿನಾಂಕ: ಸುರೇಶ್
ಸ್ಥಳ : ಜ್ಞಾನ ಸಹ್ಯಾದ್ರಿ ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ
ನೋ.ಸಂ. DJ101001

ಈ ಸಂಶೋಧನಾತ್ಮಕ ಪ್ರೌಢ ಪ್ರಬಂಧವನ್ನು ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್ ವಿದ್ಯಾರ್ಥಿ ಸುರೇಶ್ ಅವರು ನನ್ನ ಮಾರ್ಗದರ್ಶನದಲ್ಲಿ ರಚಿಸಿದ್ದಾರೆ.

**ಡಾ. ಸತೀಶ್ ಕುಮಾರ್**
,ಸಹ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪದವಿಯ ಪರಿಪೂರ್ಣತೆಯ ಭಾಗವಾಗಿ ಸಲ್ಲಿಸಿದ ಈ ಸಂಶೋಧನಾತ್ಮಕ ಪ್ರೌಢಪ್ರಬಂಧವನ್ನು ಅಂಗೀಕರಿಸಲಾಗಿದೆ.

ಸಂಯೋಜಕರು
ಕನ್ನಡ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್
ದೂರ ಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾಲಯ

**ಪರಿವಿಡಿಯ ಮಾದರಿ**

## ಪರಿವಿಡಿ


| ಅಧ್ಯಾಯಗಳು | ಪುಟದ ಸಂಖ್ಯೆ |
|---|---|
| 1] ಪೀಠಿಕೆ | 1 –13 |
| 2] ಸಾಹಿತ್ಯ ವಿಮರ್ಶೆ | 14 – 16 |
| 3] ಅಧ್ಯಯನ ವಿಧಾನ | 17 –25 |
| 4] ದತ್ತಾಂಶ ವಿಶ್ಲೇಷಣೆ | 26 – 55 |
| 5] ಪ್ರಮುಖ ಫಲಿತಾಂಶಗಳು, ಶಿಫಾರಸ್ಸುಗಳು ಮತ್ತು ಉಪಸಂಹಾರ | 56 –61 |
| ಆಧಾರ ಗ್ರಂಥಗಳು | 62 –63 |
| ಅನುಬಂಧ | |